Rd No B G 155 ಶ್ರೀ 28-2-1970

SATYAVADI Daily, MYSORE 4 ★★ 53 rd Year of Publication

Golden Jubilee Celebrated Paper

ಸತ್ಯವಾದಿ

ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಪ್ರಕಟಿಸಿದ ಪತ್ರಿಕೆ

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಪಾರ್ಲಿಮೆಂಟ್ ವಿಸರ್ಜನೆ ಬಗ್ಗೆ ಲೋಕಸಭೆಯಲ್ಲಿ ಚರ್ಚೆ

ಚಲಚ್ಚಿತ್ರದಲ್ಲಿ ಚುಂಬನ

ನವದೆಹಲಿ— ಕೋಸಲ ಸಮಿತಿಯು ಚಲಚ್ಚಿತ್ರಗಳಲ್ಲಿ ಚುಂಬನ ಮತ್ತು ನಗ್ನತೆ ಬಗ್ಗೆ ಮಾಡಿರುವ ಶಿಫಾರಸುಗಳ ವಿಚಾರವೇನಾಯಿತೆಂದು ಕುತೂಹಲ ಸದಸ್ಯರು ರಾಜ್ಯ ಸಭೆಯಲ್ಲಿ ಕೇಳಿದಾಗ, ಸ್ವಲ್ಪ ತಾಳ್ಮೆ ಹೊಂದಿರಿ ಎಂದು ಉತ್ತರ ಕೊಡಲಾಯಿತು.

★

ಕೆಲಸಗಳು ಹೆಚ್ಚಾಗಿದ್ದವು

ನವದೆಹಲಿ— 64-65 ರಿಂದ 68-69 ರವರೆಗೆ ಹೊಸ ಕೇಂದ್ರ ಸಚಿವಾಲಯಗಳಲ್ಲಿ ಮತ್ತು ಕಛೇರಿಗಳಲ್ಲಿ 11664 ಕೆಲಸಗಳು ಹೆಚ್ಚಾಗಿದ್ದು ಕಂಡುಬಂದಿತೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ಕ್ಯಾಲೆಂಡರ್ ಸ್ವೀಕಾರ

ಮೈಸೂರು ಸರಕಾರದ ಗಂಧದನುರದ ಎಣ್ಣೆ ಕಾರ್ಖಾನೆಯ ಸುಂದರವಾದ ತ್ರಿವರ್ಣ ಚಿತ್ರಗಳುಳ್ಳ ಕ್ಯಾಲೆಂಡರನ್ನು ವಂದನಾಪೂರ್ವಕವಾಗಿ ಸ್ವೀಕರಿಸಿದ್ದೇನೆ.

ಪ್ರಧಾನಿಯವರ ಪ್ರವಾಸ ಖರ್ಚು

ನವದೆಹಲಿ— ಉತ್ತರ ಪ್ರದೇಶದಲ್ಲಿ ಮುಂದಿನ ಮಧ್ಯಾವಧಿ ಚುನಾವಣಾ ಕಾಲದಲ್ಲಿ ಪ್ರಧಾನಿಯವರ ಪ್ರವಾಸಕ್ಕೆ ರಕ್ಷಣಾ ವ್ಯವಸ್ಥೆಗೆ ರೂ 35 ಲಕ್ಷ ಖರ್ಚಾಯಿತೆಂದೂ, ಅವರ ಈಚಿನ ಪ್ರವಾಸಕ್ಕೆ ರೂ 3.33 ಲಕ್ಷ ಖರ್ಚಾಯಿತೆಂದೂ ಉತ್ತರ ಪ್ರದೇಶ ಸರಕಾರ ತಿಳಿಸಿರುವುದನ್ನು ಲೋಕಸಭೆಯಲ್ಲಿ ತಿಳಿಸಿದಾಗ ವಿರೋಧ ಪಕ್ಷಗಳು ತೀವ್ರ ಟೀಕಿಸಿದವು.

★

ಮುಖ್ಯ ಮಂತ್ರಿಗಳ ಹಿತಬೋಧೆ

ಬೆಂಗಳೂರು— ಗಡಿ ಸಮಸ್ಯೆ ಬಗ್ಗೆ ವಿದ್ಯಾರ್ಥಿಗಳೂ ಯುವಕರೂ ತೀವ್ರ ಆಸಕ್ತಿ ವಹಿಸಿದ್ದಾನೆಂದೂ ಹಿಂಸಾ ಚಳವಳಿಗಳಿಗೆ ಕೈಹಾಕಬಾರದೆಂದೂ, ಈ ಸಮಸ್ಯೆ ಪರಿಹಾರವನ್ನು ದೊಡ್ಡವರಿಗೆ ಬಿಡಬೇಕೆಂದೂ, ಪ್ರಧಾನಿಯರ ನುತ್ತಿತರ ಪ್ರತಿರೂಪಗಳನ್ನು ಸುಡಬಾರದೆಂದೂ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಮನವಿಮಾಡಿದರು.

★

ರಾಷ್ಟ್ರೀಕರಣವಿಲ್ಲ

ನವದೆಹಲಿ— ಔಷಧಿ ಕೈಗಾರಿಕೆಯನ್ನು ರಾಷ್ಟ್ರೀಕರಣ ಮಾಡಬೇಕೆಂಬ ಕೇಳಿಕೆಯನ್ನು ರಾಜ್ಯಸಭೆಯಲ್ಲಿ ತಿರಸ್ಕರಿಸಲಾಯಿತು.

○

ಮಧ್ಯಮಾರ್ಗ ಸಾಗದು

ಕಲ್ಕತ್ತಾ— ಭಾರತವು ಬಂಡವಾಳಶಾಹಿ ಆಥವಾ ಸಮಾಜವಾದಿ ಆಗಬೇಕೆಂದೂ ಈಗ ಅದು ಪ್ರಯತ್ನಿಸುತ್ತಿರುವಂತೆ ಇವೆರಡರ ಮಿಶ್ರ ಆರ್ಥಿಕತೆಯಿಂದ ವಿಜಯಗೊಳ್ಳಲಾಗುವುದಿಲ್ಲವೆಂದೂ ಪ್ರಖ್ಯಾತ ರಾಜಕೀಯ ವಿಜ್ಞಾನಿ ಪ್ರೊ॥ ನಾರ್ತ್‌ಕೋಟ್ ಪಾರ್ಕಿನ್ಸ್ ಹೇಳಿದರು.

○

ಸೇನಾಗಳು

ನವದೆಹಲಿ— ವಿವಿಧ ಸ್ವಯಂಸೇವಕ ಸಂಸ್ಥೆಗಳ ಚಟುವಟಿಕೆಯನ್ನು ಸರಕಾರ ಜಾಗರೂಕತೆಯಿಂದ ನೋಡುತ್ತಿದೆ ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ರಷ್ಯಾ ಹುಡುಗಿಯ ಭಾರತ ನಾಟ್ಯ

ನವದೆಹಲಿ— ಭಾರತದಿಂದ ಮಾಸ್ಕೋಗೆ ಹೋದನಂತರ ತಾನು ಅಲ್ಲಿ ಭರತನಾಟ್ಯ ಪ್ರದರ್ಶಿಸುವುದಾಗಿ 22 ವರ್ಷದ ರಷ್ಯಾ ಹುಡುಗಿ ವಿಸಕತಾನಿಯಾ ಸಲಿರುವಾ ಹೇಳಿದಳು – ಈಕೆ 3 ವರ್ಷಗಳಿಂದ ಪೌರಾತ್ಯ ನೃತ್ಯ ಅಭ್ಯಸಿಸುತ್ತಿದ್ದಳು.

○

ಗೋಹತ್ಯಾನಿಷೇಧ

ನವದೆಹಲಿ— ಲೋಕಸಭೆಯಲ್ಲಿ ಸೇಟ್ ಗೋವಿಂದದಾಸರು ಗೋಹತ್ಯಾ ನಿಷೇಧ ಜಾರಿಗೆ ಬರಬೇಕೆಂದು ಸೂಚಿಸಿದರು.

ಪಾರ್ಲಿಮೆಂಟು ವಿಸರ್ಜನೆ ವಿಷಯ

ನವದೆಹಲಿ— ಪಾರ್ಲಿಮೆಂಟನ್ನು ವಿಸರ್ಜನೆ ಮಾಡುವ ರಾಷ್ಟ್ರಾಧ್ಯಕ್ಷರ ಹಕ್ಕನ್ನು ಸ್ವಲ್ಪ ನಿರ್ಬಂಧಗೊಳಿಸುವ ಪಿಎಸ್ಪಿ ಶ್ರೀನಿವಾಸ ಮಿಶ್ರರ ಖಾಸಗಿ ಮಸೂದೆ ಚರ್ಚೆ ಲೋಕಸಭೆಯಲ್ಲಿ ಅನಕಾಶ ದೊರೆಯಿತು.

★

[illegible] ಮೆರವಣಿಗೆ

ಹೈದರಾದು— ಆಂಧ್ರ ಪ್ರದೇಶದಾದ್ಯಂತ 20000 ಕಮ್ಯೂನಿಸ್ಟು ನಾಯಕ ಎಕೆ ಗೋಪಾಲ್ ಮತ್ತು ಸುಂದರಯ್ಯನವರ ನೇತೃತ್ವದಲ್ಲಿ ಶಾಸನ ಸಭೆಗೆ ಹೊರಟು ತಮ್ಮ ಕೇಳಿಕೆಯನ್ನು ಮುಖ್ಯ ಮಂತ್ರಿಯವರಿಗೆ ಕಛೇರಿಯಲ್ಲಿ ಕೊಟ್ಟರು.

○

ಜೋಡು ಎಸೆತ

ಲಕ್ನೋ— ಉತ್ತರ ಪ್ರದೇಶ ಶಾಸನ ಸಭೆಯಲ್ಲಿ ನಿನ್ನೆ ಸೊಂದಲವಾಗಿ ಜನಸಂಘದ ಶ್ರೀ ಜಯಸ್ವಾಲ್ ಹೊಸ ಕಾಂಗ್ರೆಸ್ ಬೆಂಚಿನ ಮೇಲೆ ಕುಳಿತಿದ್ದ ಶ್ರೀ ಸೊಂಕಾರ್ ಕಡೆ ಒಂದು ಜೊತೆ ಚಪ್ಪಲಿಯನ್ನು ಎಸೆದರು.

○

ಲಿಪ್ಜಿಗ್ ಸಂತೆ

ನವದೆಹಲಿ— ಮಾರ್ಚಿ 1 ರಿಂದ ಲಿಪ್ಜಿಗ್‌ನಲ್ಲಿ ನಡೆಯುವ ಸಂತೆಯಲ್ಲಿ ಭಾರತವು ಭಾಗವಹಿಸುವುದು – ಮೈಸೂರು ಒಂದು ಸ್ಟಾಲ್ ಹೊಂದಿರುವದು.

●

ಗುಲ್ಬರ್ಗ ಬಂದ್

ಗುಲ್ಬರ್ಗ— ನಿನ್ನೆ ಗುಲ್ಬರ್ಗ ಬಂದ್ ಆಚರಿಸಲಾಯಿತು – ಭಾರಿ ಮೆರವಣಿಗೆ ನಡೆಸಿ ಪ್ರಧಾನಿ ಇಂದಿರಾ ಮತ್ತು ಗೃಹ ಮಂತ್ರಿ ಚವ್ಹಾಣರ ಪ್ರತಿರೂಪಗಳನ್ನು ಸುಡಲಾಯಿತು.

ಪುಡ್‌ಲಾಂಡ್ ಜನವರಿ 9 ನೇ ಗುರುವಾರ ಶನಿ ಆಮೋಘ ಪ್ರಾರಂಭ

ಗೆಜ್ಜೆಪೂಜೆ

ನಟವರ್ಗ— ಕಲ್ಪನ, ಅಶ್ವತ್ಥ್, ಬಾಲಕೃಷ್ಣ, ಪಂಡರಿಬಾಯಿ

ಆಪೆರಾ— 27-2-70 ರಿಂದ

.... ಮನಮೋಹಕ ತಮಿಳು ಚಿತ್ರ ....

ಇಗು ಕೋಡುಗಳ್

ಜೆಮಿನಿ ಗಣೇಶ್, ತಾಯ್ ನಾಗೇಶ್ ಮತ್ತು ಸಾಹುಕಾರ್ ಜಾನಕಿ ಅಭಿನಯ

ಭಾರತದಲ್ಲಿ ಭಿಕ್ಷುಕರು

ನವದೆಹಲಿ— ದೇಶದಲ್ಲಿ ಭಿಕ್ಷು ಪ್ರತಿಬಂಧಕ ಕಾನೂನಿದ್ದರೂ ಭಿಕ್ಷುಕರ ಸಂಖ್ಯೆ 1951 ರಿಂದ 1961 ರವರೆಗೆ 5 ಲಕ್ಷದಿಂದ ಒಂದು ಮಿಲಿಯದಷ್ಟಾಗಿದೆಯೆಂದೂ, ಇದು 1971 ರ ಹೊತ್ತಿಗೆ 2 ಮಿಲಿಯಕ್ಕೂ ಹೆಚ್ಚಾಗಬಹುದೆಂದೂ ಈ ಬಗ್ಗೆ ನಡೆಸಿದ ಸರ್ವೆ ವ್ಯಕ್ತಪಡಿಸಿದೆ.

ಆಹ್ಲಾದಕರ
ಸುವಾಸನೆ

●★●

ಮೈಸೂರು ಗಂಧದ ಎಣ್ಣೆಯು

ತನ್ನ ಶ್ರೇಷ್ಠತೆಯಿಂದ
ಜಗದ್ವಿಖ್ಯಾತಿಯನ್ನು ಪಡೆದಿದೆ.
ಪರಿಶುದ್ಧವಾದ ಗಂಧದ ಎಣ್ಣೆಯು
ಮೈಸೂರು ಸರ್ಕಾರದ ಸೀಲು ಮತ್ತು
ಲೇಬಲ್‌ಗಳುಳ್ಳ ಸೀಸೆಗಳಲ್ಲಿ ಮಾತ್ರ
ದೊರೆಯುತ್ತವೆ.

●

ಮೈಸೂರು ಸರ್ಕಾರದ
ಗಂಧದಎಣ್ಣೆ ಕಾರ್ಖಾನೆ,
ಮೈಸೂರು ಮತ್ತು ಶಿವಮೊಗ್ಗ.

ರಫ್ತಿಗೆ ಅಕ್ಕಿ

1975 ರಲ್ಲಿ ಭಾರತದಿಂದ 5 ಲಕ್ಷ ಟನ್ ಅಕ್ಕಿ ರಫ್ತಿಗೆ ದೊರೆಯುವುದೆಂದು ಆಹಾರ ಮತ್ತು ವ್ಯವಸಾಯ ಸಚಿವಾಲಯದ ಆರ್ಥಿಕ ಮತ್ತು ಅಂಕಿಅಂಶ ಸಲಹೆಗಾರರು ಹೇಳಿರುವರು.

ಪುರಾತನ ನಾಣ್ಯಗಳು

ಜಮ್ಮು— ಪುರಾತನ ಮತ್ತು ಐತಿಹಾಸಿಕ ಪ್ರಾಮುಖ್ಯತೆಯ 200 ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ರಾಂಕೋಟ್‌ನಲ್ಲಿ ಅಗೆಯುತ್ತಿದ್ದಾಗ ಸಿಕ್ಕಿವೆ.

ತಾಯಿಯನ್ನು ಮಗ ಮದುಯಾಗುವ ಪದ್ಧತಿ

ಕಲ್ಕತ್ತಾ— ನೇಫಾದ ಕಮಲಾಂಗ್‌ನಲ್ಲಿ ಪ್ರತಿ ಹೆಣ್ಣುಮಗುವೂ ಐಶ್ವರ್ಯಕ್ಕೆ ರಹದಾರಿ ಎಂದು ಭಾವಿಸಲಾಗಿದೆ ; ಅಲ್ಲಿ ಮದುವೆಗೆ ತುಂಬಾ ಹಣ ಪದಾರ್ಥ ಕೊಟ್ಟು ಹೆಣ್ಣನ್ನು ಪಡೆಯಲಾಗುವುದು : ಹೀಗೆ ವಧುವನ್ನು ಪಡೆಯಲು ಹೆಚ್ಚು ಅನುಕೂಲವುಳ್ಳ ಪುರುಷರು 10–15 ಮಂದಿ ಹೆಂಡತಿಯರನ್ನು ಹೊಂದಿರುವರು — ಒಬ್ಬನು ಸತ್ತುಹೋದಾಗ, ಆತನ ಕಿರಿಯ ಹೆಂಡತಿಯನ್ನು ಆತನ ಹಿರಿಯ ಮಗ ಮದುವೆಯಾಗಬೇಕು !

○ ಅಮೇರಿಕಾದಲ್ಲಿ ಗಾಂಧಿ ಶತಮಾನೋತ್ಸ ಸಂಬಂಧದಲ್ಲಿ ಮಾರ್ಚಿ 15 ರಿಂದ 2 ತಿಂಗಳ ಕಾಲ ಪ್ರದರ್ಶನ ಏರ್ಪಡಿಸಲಾಗುವುದು.

ದೇಶದ ಹಿತಕ್ಕಾಗಿ ಕುಟುಂಬ ಯೋಜನೆ

Help The Gorakshana



Protect the Cow

ಗೋರಕ್ಷಣೆ ಮಂತ್ರ, ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ
ಗೋರಕ್ಷಣೆಗೆ ಬೆಂಬಲ ನೀಡಿ

ಅಖಿಲ ಭಾರತದಲ್ಲಿ ಕೂಡಲೇ ಗೋವಧೆ ನಿಷೇಧವಾಗಲಿ

Edited Printed & Published by Dharmaprachara Nirata M S Krishna Rao (Proprietor) at the Satyavadi Press Shanmukhavihar, Mysore